(ಆ) ಇ-ಸ್ಟಾಂಪಿಂಗ್ ವ್ಯವಸ್ಥೆ ಜಾರಿಗೊಳಿಸುವುದರಿಂದ ಸಾರ್ವಜನಿಕರಿಗೆ ಯಾವ ರೀತಿ ಸರಳ ಹಾಗೂ ಸುರಕ್ಷತೆಯನ್ನು ಒದಗಿಸಿಕೊಡಲಾಗಿದೆ?

ಸಾರ್ವಜನಿಕರು ತಾವು ಮುದ್ರಾಂಕಿಸಿಕೊಳ್ಳಬೇಕಾದ ದಸ್ತಾವೇಜುಗಳನ್ನು ಅರ್ಜಿ ಹಾಗೂ ನಿಗದಿತ ಮುದ್ರಾಂಕ ಶುಲ್ಕದೊಂದಿಗೆ ಇ-ಸ್ಟಾಂಪಿಂಗ್ ಕೇಂದ್ರದಲ್ಲಿ ಹಾಜರುಪಡಿಸಿದಲ್ಲಿ ಕೂಡಲೇ ಸದರಿ ದಸ್ತಾವೇಜಿಗೆ ಮುದ್ರಾಂಕ ಶುಲ್ಕ ಪಾವತಿಸಿದ ಬಗ್ಗೆ ದೃಢೀಕರಣವನ್ನು ಮಾಡಿಕೊಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರಿಂದ ಈ ಹಿಂದೆ ಕಾಗದ ಬಳಕೆಯಿಂದ ಆಗುತ್ತಿದ್ದ ಅಕ್ರಮಗಳನ್ನು ತಡೆಯಲು ರಕ್ಷಣಾತ್ಮಕವಾದ ಮುದ್ರಾಂಕ ಶುಲ್ಕ ಸಂಗ್ರಹದ ಕ್ರಮವನ್ನು ಜಾರಿಯಲ್ಲಿ ತರಲು ಮತ್ತು ದಾಖಲೆಗಳ ನಿರ್ವಹಣೆ, ಸಂಗ್ರಹಣೆ ಅವುಗಳ ಪರಿಶೀಲನೆಗೆ ಅನುಕೂಲವಾಗುತ್ತಿರುವುದಲ್ಲದೆ ವಿಳಂಬವಿಲ್ಲದೆ ಮುದ್ರಾಂಕದ ದೃಢೀಕರಣವನ್ನು ಪಡೆಯಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಸದರಿ ವ್ಯವಸ್ಥೆಯಲ್ಲಿ ಅಳವಡಿಸಿರುವ ಆಧುನಿಕ ಪದ್ಧತಿಯಿಂದ ಮುದ್ರಾಂಕದ ದೃಢೀಕರಣವನ್ನು ನಕಲು ಮಾಡಲು, ತಿದ್ದಲು ಹಾಗೂ ವಂಚಿಸಲು ಅವಕಾಶವಿರುವುದಿಲ್ಲ. ಈ ರೀತಿಯಲ್ಲಿ ಸಾರ್ವಜನಿಕರಿಗೆ ಸುರಕ್ಷತೆಯನ್ನು ಮತ್ತು ಮುದ್ರಾಂಕಗಳ ದೃಢೀಕರಣ ಹೊಂದುವಲ್ಲಿ ಸರಳತೆಯನ್ನು ಒದಗಿಸಲಾಗಿದೆ.

(ಇ) ರಾಜ್ಯಾದ್ಯಂತ ಈ ನೂತನ ನೋಂದಣಿ ವ್ಯವಸ್ಥೆಯನ್ನು ಜಾರಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಇ-ಮುದ್ರಾಂಕ ವ್ಯವಸ್ಥೆಯನ್ನು ರಾಜ್ಯದ ಇತರೆಡೆಯಲ್ಲಿಯೂ ಹಂತ ಹಂತವಾಗಿ ಜಾರಿಗೆ ತರುವ ಪ್ರಸ್ತಾವನೆಗೆ 2008-09ನೇ ಸಾಲಿನ ಮುಂಗಡ ಪತ್ರದಲ್ಲಿ ಅನುಮೋದನೆ ದೊರೆತಿದ್ದು, ಈ ಸಂಬಂಧ ನಿಯಮಾವಳಿಯನ್ನು ರಚಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದ್ದು, ಸದರಿ ನಿಯಮಾವಳಿಯು ಜಾರಿಗೆ ಬಂದ ನಂತರ ರಾಜ್ಯಾದ್ಯಂತ ಸದರಿ ವ್ಯವಸ್ಥೆಯನ್ನು ಹಂತ ಹಂತವಾಗಿ ಜಾರಿಗೆ ತರಲಾಗುವುದು.

ವಿಷಯ: ರಾಜ್ಯ ಕೈಗಾರಿಕಾ ನೀತಿಯ ಪರಿಷ್ಕರಣೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**(299)141**
2. ಸದಸ್ಯರ ಹೆಸರು	**:**	**ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)**
3. ಉತ್ತರಿಸುವ ಸಚಿವರು	**:**	**ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾಸಚಿವರು(ಶ್ರೀ ಮುರುಗೇಶ ಆರ್.ನಿರಾಣಿ)**

ಅ. ರಾಜ್ಯದಲ್ಲಿರುವ ಕೈಗಾಗಿಕಾ ನೀತಿಯ ಪರಿಷ್ಕರಣೆ ಕುರಿತು ಸರ್ಕಾರದ ನಿಲುವುಗಳೇನು;

ರಾಜ್ಯದಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸುವಂತಹ ಹೂಡಿಕೆಗೆ ಸ್ನೇಹಪರವಾದ ಪರಿಸರವನ್ನು ಕಲ್ಪಿಸುವ ನಿಟ್ಟಿನಲ್ಲಿ 2006-11ರ ಕೈಗಾರಿಕಾ ನೀತಿಯನ್ನು ಮರುಪರಿಷ್ಕರಿಸಲಾಗುವುದು.

ಆ. ಈ ಬಗ್ಗೆ ಯಾವ ಮಾರ್ಪಾಡುಗಳನ್ನು ಅಳವಡಿಸಲು ಸರ್ಕಾರ ಉದ್ದೇಶಿಸಿದೆ.

ರಾಜ್ಯದ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಗಮನದಲ್ಲಿರಿಸಿಕೊಂಡು 6 ವಿಶೇಷ ಕೈಗಾರಿಕಾ ವಲಯಗಳನ್ನು ಅಂದರೆ ಉಕ್ಕು, ಸಿಮೆಂಟ್, ಜವಳಿ, ಐಟಿ/ಬಿಟಿ, ಆಟೊಮೊಬೈಲ್ ಹಾಗೂ ಆಹಾರ ಸಂಸ್ಕರಣಾ ವಲಯಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ರೂಪಿಸಲಾಗುವುದು.

ರಾಜ್ಯದ ಉದ್ದಗಲಕ್ಕೂ ಕೈಗಾರಿಕಾಭಿವೃದ್ಧಿಗೆ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆಯನ್ನು ಜಾರಿಗೊಳಿಸಲಾಗುವುದು.

ರಾಜ್ಯದಲ್ಲಿ ಅಧಿಕ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು 2009ರ ಜನವರಿಯಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲಾಗುವುದು.

ಕೈಗಾರಿಕಾಭಿವೃದ್ಧಿಗಾಗಿ ವಿಷನ್ ಗ್ರೂಪ್ ನೇಮಕ ಮಾಡಲಾಗುವುದು.

ಜಿಲ್ಲೆಯಲ್ಲಿರುವ ಕೈಗಾರಿಕಾ ನೀತಿಗೆ ಬದಲಾವಣೆಗಳನ್ನು ತರುವ ದೃಷ್ಟಿಯಿಂದ ಕೈಗಾರಿಕೋದ್ಯಮಿಗಳೊಡನೆ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳೊಡನೆ ಚರ್ಚೆ ಪ್ರಾರಂಭವಾಗಿದೆ. ಬದಲಾವಣೆಯನ್ನು ಕೈಗಾರಿಕೋದ್ಯಮಿಗಳ ಬೇಡಿಕೆಗೆ ಅನುಗುಣವಾಗಿ ಅಳವಡಿಸಲಾಗುವುದು.

ಇ. ಪ್ರಸ್ತುತ ಎಷ್ಟು ಯೋಜನೆಗಳಿಗೆ ಸರ್ಕಾರ ಮಂಜೂರಾತಿ ನೀಡಿದೆ; ಅವುಗಳ ವಿವರಗಳೇನು?

ಕಳೆದ 5 ವರ್ಷಗಳಲ್ಲಿ ಅಂದರೆ 2003-04 ರಿಂದ 2007-08ರವರೆಗೆ 2272 ಘಟಕಗಳಿಗೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯು ಅನುಮೋದನೆ ನೀಡಿದ್ದು ಇವುಗಳಿಂದ ರೂ.37469.07 ಕೋಟಿ ಬಂಡವಾಳ ಹೂಡಿಕೆ ಆಗಲಿದ್ದು ಮತ್ತು ಇವುಗಳಿಂದ 1595060 ಜನರಿಗೆ ಉದ್ಯೋಗ ಅವಕಾಶ ಸಿಗುವ ನಿರೀಕ್ಷೆ ಇದೆ ಮತ್ತು 283 ಘಟಕಗಳಿಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯು ಅನುಮೋದನೆ ನೀಡಿದ್ದು, ಇವುಗಳಿಂದ ರೂ.337172.01 ಕೋಟಿ ಬಂಡವಾಳ ಹೂಡಿಕೆ ಆಗಲಿದ್ದು ಮತ್ತು ಇವುಗಳಿಂದ 3587684 ಜನರಿಗೆ ಉದ್ಯೋಗ ಅವಕಾಶ ಸಿಗುವ ನಿರೀಕ್ಷೆ ಇದೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ LAQ – 299

ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಗಳಲ್ಲಿ ಅನುಮೋದನೆಗೊಂಡ ಪ್ರಸ್ತಾವನೆಗಳ ವಿವರ

ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ (ರೂ.3.00 ಕೋಟಿಗಳಿಂದ ರೂ.50.00 ಕೋಟಿ ಒಳಗಿನ ಬಂಡವಾಳ ಹೂಡಿಕೆಯ ಯೋಜನೆಗಳು)				ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (ರೂ.50.00 ಕೋಟಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯ ಯೋಜನೆಗಳು)				ಒಟ್ಟು			
ಆರ್ಥಿಕ ವರ್ಷ	ಯೋಜನೆಗಳ ಸಂಖ್ಯೆ	ಬಂಡವಾಳ ಹೂಡಿಕೆ (ರೂ.ಕೋಟಿಗಳಲ್ಲಿ)	ಉದ್ಯೋಗ ವಕಾಶ	ಆರ್ಥಿಕ ವರ್ಷ	ಯೋಜನೆಗಳ ಸಂಖ್ಯೆ	ಬಂಡವಾಳ ಹೂಡಿಕೆ (ರೂ.ಕೋಟಿಗಳಲ್ಲಿ)	ಉದ್ಯೋಗ ವಕಾಶ	ಆರ್ಥಿಕ ವರ್ಷ	ಯೋಜನೆಗಳ ಸಂಖ್ಯೆ	ಬಂಡವಾಳ ಹೂಡಿಕೆ (ರೂ.ಕೋಟಿಗಳಲ್ಲಿ)	ಉದ್ಯೋಗ ವಕಾಶ
2003–04	164	3893.47	111405	2003–04	26	10263.61	99313	2003–04	190	14157.0818	210718
2004–05	202	4524.76	109028	2004–05	29	31718.05	130642	2004–05	231	36242.81	239670

2005 –06	297	6786.57	292309	2005– 06	55	44411.69	588259	2005 –06	352	51198.26	880568
2006 –07	881	11954.35	732653	2006– 07	65	90255.84	772966	2006 –07	946	102210.19	1505619
2007 –08	728	10309.92	349665	2007– 08	108	160522.82	1996504	2007 –08	836	170832.74	2346169
	2272	**37469.07**	**1595060**		**283**	**337172.01**	**3587684**	ಒಟ್ಟು	**2555**	**374641.0818**	**5182744**